ಹೊಸ ಗ್ರಂಥಾಲಯ ಪ್ರಾರಂಭಿಸುವ ಬಗ್ಗೆ

84(305): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ ಕ್ಷೇತ್ರ): ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ ಎಷ್ಟು? (ಗ್ರಂಥಾಲಯವಾರು ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) 2010–11ನೇ ಸಾಲಿನಲ್ಲಿ ಭಾಲ್ಕಿ ಮತಕ್ಷೇತ್ರದ ಯಾವ ಯಾವ ಸ್ಥಳಗಳಲ್ಲಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು?

ಇ) ಈ ಸಂಬಂಧವಾಗಿ ಸರ್ಕಾರದ ಮುಂದೆ ಎಷ್ಟು ಪ್ರಸ್ತಾವನೆಗಳು ಬಾಕಿ ಇವೆ? (ಪೂರ್ಣ ವಿವರಗಳನ್ನು ಒದಗಿಸುವುದು);

ಶ್ರೀ ರೇವೂ ನಾಯಕ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಗ್ರಂಥಾಲಯಗಳು 206

ಬಸವ ಕಲ್ಯಾಣ ಮತ ಕ್ಷೇತ್ರ	–	38
ಹುಮನಾಬಾದ್ ಮತಕ್ಷೇತ್ರ	–	38
ಬೀದರ್ (ದಕ್ಷಿಣ) ಮತಕ್ಷೇತ್ರ	–	32
ಬೀದರ್ (ಉತ್ತರ) ಮತಕ್ಷೇತ್ರ	–	20
ಭಾಲ್ಕಿ ಮತಕ್ಷೇತ್ರ	–	37
ಔರಾದ್ ಮತಕ್ಷೇತ್ರ	–	41

ಆ) ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

ಇ) ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.

ಗ್ರಂಥಾಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ

85(306): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ